ಶ್ರೀ ಬಿ. ರಾಚಯ್ಯ.—ಈ ಬಗ್ಗೆ ನನ್ನ ಬಳಿ ಈಗ ವಿವರಗಳು ಇಲ್ಲ. ಇದರಲ್ಲಿ ನಾನು ಯಾವುದನ್ನೂ ಬಚ್ಚಿಟ್ಟಿಲ್ಲ. ಈ ಪ್ರಕರಣದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವ ಸಲುವಾಗಿ ನಾನು ಅಲ್ಲಿಗೆ ಎರಡು ಸಲ ಹೋಗಿ ಪರಿಶೀಲನೆ ಮಾಡಿ ಬಂದಿದ್ದೇನೆ. ನಾನು ಹೋದಾಗ ಅಲ್ಲಿನ ಜನ ಜಾಗೃತ ಸಮಿತಿಯವರ ಜೊತೆಗೆ ಹಾಗೂ ಅಲ್ಲಿನ ಮುನಿಸಿಪಾಲಿಟಿಯವರ ಜೊತೆ ಮಾತನಾಡಿದ್ದೇನೆ. ಈ ಪ್ರಕರಣದಲ್ಲಿ ಸೋಂದ ಹಿಂದೂ ಮತ್ತು ಮುಸಲ್ಮಾನರ ಕುಟುಂಬಗಳ ಜೊತೆಗೆ ಮಾತನಾಡಿದ್ದೇನೆ. ಈ ಬಗ್ಗೆ ಏನೇನು ಕ್ರಮ ಕೈಗೊಳ್ಳಬೇಕೆಂಬ ಬಗ್ಗೆ ನಾನು ಸಂಬಂಧಪಟ್ಟವರಿಗೆ ಸೂಕ್ತ ತಿಳಿವಳಿಕೆ ಕೊಟ್ಟು ಬಂದಿದ್ದೇನೆ. ಅನ್ಯಾಯಕ್ಕೆ ಒಳಗಾದ ಹಿಂದೂ ಮತ್ತು ಮುಸ್ಲಿಮರಿಗೆ ಸೂಕ್ತ ರಕ್ಷಣೆ ಕೊಟ್ಟಿದ್ದೇವೆ. ಇಂತಹವರಿಗೆ ಪರಿಹಾರವನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಶ್ರೀ ಡಿ. ಎ. ಚಿನ್ನಪ್ಪ.—ಇಲ್ಲಿ ೭೯ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ ಎಂದು ಹೇಳಿದ್ದೀರಿ ಮತ್ತು ೯೦ ಜನರನ್ನು ದಸ್ತಗಿರಿ ಮಾಡಲಾಗಿದೆ ಎಂದು ಹೇಳಿದ್ದೀರಿ. ಈ ಬಗ್ಗೆ ಹಿಂದೂ ಗಳೆಷ್ಟು ಮತ್ತು ಮುಸಲ್ಮಾನರೆಷ್ಟು ಎಂಬ ವಿವರಗಳನ್ನು ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಆ ವಿವರಗಳು ಈಗ ನನ್ನ ಬಳಿ ಇಲ್ಲ. ಅದನ್ನು ತರಿಸಿಕೊಡುತ್ತೇನೆ.

ಸಾಲೂರು ಗ್ರಾಮದಲ್ಲಿ ಆರೋಗ್ಯ ಘಟಕ

೫೯ (೨೦೩) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) ಮಾನ್ಯ ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು.—ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರ ತಾಲ್ಲೂಕು ಸಾಲೂರು ಗ್ರಾಮದಲ್ಲಿ ಆರೋಗ್ಯ ಘಟಕ ಪ್ರಾರಂಭವಾಗಿ ಎಷ್ಟು ವರ್ಷಗಳಾಯಿತು ?

ಆ) ಈ ವರೆಗೆ ಅಲ್ಲಿ ವೈದ್ಯಾಧಿಕಾರಿಯವರನ್ನು ನೇಮಿಸದಿರಲು ಕಾರಣಗಳೇನು ?

ಇ) ಶಿಕಾರಿಪುರ ತಾಲ್ಲೂಕಿನ ಬೇರೆ ಯಾವ ಯಾವ ಆರೋಗ್ಯ ಘಟಕಗಳಿಗೆ ವೈದ್ಯಾಧಿಕಾರಿಗಳಿರುವುದಿಲ್ಲ, ಈ ಬಗ್ಗೆ ಸರಕಾರದವರು ಕೈ ಕೊಂಡಿರುವ ಕ್ರಮಗಳೇನು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ೪ ಮಾರ್ಚ್ ೧೯೮೪ ರಿಂದ (೪-೩-೧೪ರಿಂದ)

ಆ) ಒಬ್ಬ ವೈದ್ಯಾಧಿಕಾರಿಯನ್ನು ದಿನಾಂಕ ೨೭-೧೧-೮೬ ರಲ್ಲಿ ನೇಮಕ ಮಾಡಲಾಗಿದೆ.

ಪ್ರಾಥಮಿಕ ಆರೋಗ್ಯ ಘಟಕ, ಯಲಿಗೆರೆ ಇಲ್ಲಿ ಹಿನೇ ದರ್ಜೆ ವೈದ್ಯಾಧಿಕಾರಿಯು ಹುದ್ದೆಯಾಗಿರುವುದರಿಂದ ಜೂನ್ ೧೯೮೬ ರಿಂದ ಹುದ್ದೆ ಖಾಲಿ ಇದೆ.

ಶ್ರೀ ಬಿ. ರಾಚಯ್ಯ (ಗೃಹಸಚಿವರು).—ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡುತ್ತೇನೆ.

ಮಂತ್ರಿ ಮಂಡಲದ ಖರ್ಚಿನ ಬಗ್ಗೆ

೪೪ (೯) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿಂದಿನ ಸರಕಾರದಲ್ಲಿ ಪ್ರತಿ ಸಚಿವರಿಗೆ ಒಂದು ವರ್ಷಕ್ಕೆ ಸರಾಸರಿ ಖರ್ಚಾಗುವ ಹಣವೆಷ್ಟು (ಪ್ರವಾಸ ಭತ್ಯೆ ಹಾಗೂ ಇತರ ಭತ್ಯೆ ಸೇರಿ ವಿವರಣೆ ನೀಡುವುದು)

ಆ) ಪ್ರಸಕ್ತ ಸರಕಾರದಲ್ಲಿನ ಪ್ರತಿ ಸಚಿವರುಗಳಿಗೆ ಒಂದು ವರ್ಷಕ್ಕೆ ಸರಾಸರಿ ಖರ್ಚಾಗುವ ಮೊಬಲಗೆಷ್ಟು (ಪ್ರವಾಸ ಭತ್ಯೆ ಹಾಗೂ ಇತರ ಭತ್ಯೆ ಸೇರಿ ಸಂಪೂರ್ಣ ವಿವರಗಳನ್ನೊದಗಿಸುವುದು)